**ದಿಃ 15-04-2025 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 2ನೇ ಎದುರುದಾರ ಪರ ವಕೀಲರಾದ ಶ್ರೀಮತಿ ಎಸ್ ಎಚ್ ರವರಿಂದ**

ನಮ್ಮ ತಂದೆ ತಾಯಿಗೆ ನಾವು ಒಟ್ಟು 3 ಜನ ಮಕ್ಕಳು. ನಾನು 8ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ಶಾಲಾ ದಾಖಲಾತಿ ಪ್ರಕಾರ ನನಗೆ ಈಗ 59 ವರ್ಷ ಪ್ರಾಯ ಎಂದರೆ ಸರಿ. ಮೃತ ನನ್ನ ಅಣ್ಣ ಪುಂಡಲೀಕ ನನಗಿಂತ 2 ವರ್ಷ ದೊಡ್ಡವನು. ನನಗೆ ಮದುವೆಯಾಗಿ 13 ವರ್ಷವಾಗಿದೆ. ಪ್ರಮಾಣ ಪತ್ರದಲ್ಲಿ ಕಾಣಿಸಿದ ಮನೆ ನನ್ನ ಹೆಸರಿನಲ್ಲಿದೆ. ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ ರೇಶನ್ ಕಾರ್ಡು ನನ್ನ ತಂದೆ ತಾಯಿ ಇರುವಾಗ ಮಾಡಿದ ರೇಶನ್ ಕಾರ್ಡು. ಅದೇ ವಿಳಾಸದ ರೇಶನ್ ಕಾರ್ಡಿನಲ್ಲಿ ಈಗ ನನ್ನ ಮತ್ತು ನನ್ನ ಗಂಡನ ಹೆಸರು ಮಾತ್ರ ಕಾಣಿಸಲಾಗಿದೆ ಎಂದರೆ ಸರಿ. 2ನೇ ಅರ್ಜಿದಾರ ಶಂಕರ ದೇವಾಡಿಗ ಇವನು ನನ್ನ ಅಣ್ಣನಾಗಿದ್ದು, ಅವನು ತ್ರಾಸಿಯಲ್ಲಿರುವ ಅವನ ಹೆಂಡತಿ ಮನೆಯಲ್ಲಿ ವಾಸವಾಗಿದ್ದಾನೆ. ಅವನು ತ್ರಾಸಿನಲ್ಲಿ ಹೂವಿನ ವ್ಯಾಪಾರ ಮಾಡಿಕೊಂಡಿದ್ದಾನೆ. ಮೃತ ಪುಂಡಲೀಕ ಇವನ ಹೆಸರು ಈಗ ಯಾವುದೇ ರೇಶನ್ ಕಾರ್ಡಿನಲ್ಲಿ ಕಂಡು ಬರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುನ್ನುಡಿದು ಅವನು ಮೃತಪಟ್ಟ ನಂತರ ಅವನ ಹೆಸರನ್ನು ತೆಗೆದು ಹಾಕಲಾಗಿದೆ ಅಂತ ನುಡಿಯುತ್ತಾರೆ. ನನ್ನ ತಾಯಿ ತೀರಿಕೊಂಡ ನಂತರ ಮತ್ತು ಪುಂಡಲೀಕ ತೀರಿಕೊಂಡ ನಂತರ ಹಳೇ ಎಪಿಎಲ್ ಕಾರ್ಡನ್ನು ಬಿಪಿಎಲ್ ಮಾಡುವಾಗ ಅರ್ಜಿ ಕೊಡುವ ಸಮಯದಲ್ಲಿ ನನ್ನ ತಾಯಿ ಮತ್ತು ನನ್ನ ಸಹೋದರನ ಹೆಸರನ್ನು ರೇಶನ್ ಕಾರ್ಡಿನಿಂದ ತೆಗೆದು ಹಾಕಲಾಗಿತ್ತು. ನನ್ನ ತಾಯಿ ಮೃತಪಟ್ಟ 10 – 15 ವರ್ಷ ಆಗಿದೆ. ನಿಪಿ-13 ರೇಶನ್ ಕಾರ್ಡು ಇದನ್ನು 2014ರಲ್ಲಿ ನನ್ನ ಹೆಸರಿಗೆ ಮಾಡಲಾಗಿತ್ತು. ಅರ್ಜಿಯಲ್ಲಿ ಕಾಣಿಸಿದ ಮನೆಯಲ್ಲಿ ನನ್ನ ಗಂಡ ನನ್ನ ಜೊತೆಯಲ್ಲೇ ವಾಸವಾಗಿದ್ದಾರೆ. ಅವರು ಮಾನಸಿಕ ಖಾಯಿಲೆಯಿಂದ ಬಳಲುತ್ತಿದ್ದು, ಅವರು ಯಾವುದೇ ಕೆಲಸ ಮಾಡುತ್ತಿಲ್ಲ. ತೀರಿಕೊಂಡ ಅಣ್ಣ ಪುಂಡಲೀಕ ನಮ್ಮನ್ನು ನೋಡಿಕೊಳ್ಳುತ್ತಿದ್ದ ಈಗ ನಮಗೆ ಯಾವುದೇ ಆದಾಯ ಇಲ್ಲಾ. ನನ್ನ ಗಂಡ ಮಾನಸಿಕ ಖಾಯಿಲೆಯಿಂದ ಬಳಲುತ್ತಿದ್ದ ಬಗ್ಗೆ ಮತ್ತು ಅವರು ಚಿಕಿತ್ಸೆ ಪಡೆಯುತ್ತಿದ್ದ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾವುದೇ ತೊಂದರೆ ಇಲ್ಲಾ. ಮೃತ ಪುಂಡಲೀಕ

ಮತ್ತು ನಾವು ಪ್ರತ್ಯೇಕವಾಗಿ ವಾಸವಾಗಿದ್ದು, ನಾನು ಮತ್ತು ನನ್ನ ಗಂಡ ಯಾವತ್ತೂ ಮೃತ ಪುಂಡಲೀಕನ ಆದಾಯ ಮೇಲೆ ಅವಲಂಬಿತರಾಗಿರಲಿಲ್ಲ ಎಂದರೆ ಸರಿ ಅಲ್ಲಾ. ಪುಂಡಲೀಕ ನನ್ನ ಜೊತೆಯಲ್ಲಿ ವಾಸವಾಗಿದ್ದ ಬಗ್ಗೆ ಯಾವುದೇ ದಾಖಲೆ ಇಲ್ಲಾ ಎಂದರೆ ಸಾಕ್ಷಿ ಆಧಾರ್ ಕಾರ್ಡು ಇದೆ ಆದರೆ ಅದನ್ನು ಯಾವಾಗ ಮಾಡಿದ್ದು ಅಂತ ನೆನಪಿಲ್ಲ ಅಂತ ನುಡಿಯುತ್ತಾರೆ.

ನನ್ನ ಸಹೋದರ ಮೃತ ಪುಂಡಲೀಕ ದೇವಾಡಿಗನು ದಿನೇಶ್ ಆಚಾರಿ ಬಳಿ ಕೆಲಸ ಮಾಡುತ್ತಿದ್ದು, ಅವನಿಗೆ ತಿಂಗಳಿಗೆ 24 ಸಾವಿರ ರೂ, ವೇತನ ಕೊಡುತ್ತಿದ್ದರು ಎನ್ನುವ ಬಗ್ಗೆ ಅವರ ಸಾಕ್ಷ್ಯ ಮಾಡಲು ನನಗೆ ಯಾವುದೇ ತೊಂದರೆ ಇಲ್ಲಾ. ನನ್ನ ಮೃತ ಸಹೋದರನಿಗೆ ತಿಂಗಳಿಗೆ 24 ಸಾವಿರ ರೂ. ಆದಾಯ ಇದೆ ಅಂತ ತೋರಿಸಲು ನನ್ನ ಬಳಿ ಯಾವುದೇ ಪಾಸು ಪುಸ್ತಕ ಇಲ್ಲಾ. ಸಾಕ್ಷಿ ಅವನು ಸಂಬಳವನ್ನು ನನ್ನ ಕೈಗೇ ತಂದು ಕೊಡುತ್ತಿದ್ದ ಅಂತ ನುಡಿಯುತ್ತಾರೆ. ಸಾಕ್ಷಿ ನಾವು ವಾಸವಾಗಿದ್ದ ಮನೆ ಅವನೇ ಕಟ್ಟಿದ್ದಾನೆ ಅಂತ ನುಡಿಯುತ್ತಾರೆ. ನಾನು ಈಗ ವಾಸವಾಗಿದ್ದ ಮನೆ ಅಮ್ಮನಿಂದ ನನಗೆ ವೀಲ್ ಮುಖಾಂತರ ಬಂದಿರುತ್ತದೆ. ನಾನು ಮತ್ತು 2ನೇ ಅರ್ಜಿದಾರ ಶಂಕರ ದೇವಾಡಿಗ ಮೃತಪಟ್ಟ ಪುಂಡಲೀಕನ ವಾರೀಸುದಾರರಾಗಿರುವುದಿಲ್ಲ ಮತ್ತು ನಾವು ಅವನ ಯಾವುದೇ ಆದಾಯದ ಮೇಲೆ ಅವಲಂಬಿತರಾಗಿರಲಿಲ್ಲ ಎಂದರೆ ಸರಿ ಅಲ್ಲಾ. ನನ್ನ ಮೃತ ಸಹೋದರ ಪುಂಡಲೀಕ ಯಾವತ್ತೂ ಮದುವೆಯಾಗಿಲ್ಲ. ಅವನು ಮೃತಪಡುವವರೆಗೆ ಅವಿವಾಹಿತನಾಗಿದ್ದ.

ಅಪಘಾತ ನಾನು ಕಣ್ಣಾರೆ ನೋಡಿಲ್ಲ ಆದರೆ ಕೇಳಿ ತಿಳಿದುಕೊಂಡಿದ್ದೇನೆ. ನಾನು ಮೃತ ಪುಂಡಲೀಕನ ಚಿಕಿತ್ಸೆಗೆ ಯಾವುದೇ ಹಣ ಖರ್ಚು ಮಾಡಿಲ್ಲ ಎಂದರೆ ಸರಿ ಅಲ್ಲಾ. ನಾವು ಮೃತ ಪುಂಡಲೀಕನ ವಾರೀಸುದಾರರು ಆಗದೇ ಇರುವ ಕಾರಣ ಯಾವುದೇ ಪರಿಹಾರ ಪಡೆಯಲು ಅರ್ಹತೆ ಹೊಂದಿಲ್ಲ ಎಂದರೆ ಸರಿ ಅಲ್ಲಾ.

**ಮರು ವಿಚಾರಣೆಃ** ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ**

ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
**ಕುಂದಾಪುರ**